ಬಿಟ್ಟರೆ ಸ್ವಲ್ಪ ಹೊತ್ತು ಮೌನ ರಾಜ್ಯವಾಳಿತು ಆ ಜಾಗದಲ್ಲಿ. ರಾಮಚಂದ್ರ ಅತ್ತೆ, ಮಾವನ ಬಾಯಿಯಿಂದ ಯಾವ ಆಣಿಮುತ್ತು ಉದುರುವುವೋ ಎಂದು ಕಾದು ಕೂತ. ಮಡದಿಯ ಕಡೆ ನೋಡಿದರೆ ಅವಳು ಇತ್ತಿನ ಧ್ಯಾಸ ಇಲ್ಲದವಳ ಹಾಗೆ ಜಡೆ ಹೆಣೆಸಿಕೊಳ್ಳುವ ಗಂಭೀರಕಾರ್ಯದಲ್ಲಿ ಮಗ್ನಳಾಗಿರುವಂತೆ ತಲೆ ಬಗ್ಗಿಸಿ ಅಮ್ಮನ ಕೈಗೆ ಕೊಟ್ಟು ಕೂತಿದ್ದಾಳೆ. ಮತ್ತೊಮ್ಮೆ ಕ್ಯಾಕರಿಸಿದರು ಶೀನಪ್ಪಯ್ಯ. ಈಗ ಉದುರಿ ಬೀಳುತ್ತದೆ ಮುತ್ತು. ಉದ್ವೇಗದಿಂದ ರಾಮಚಂದ್ರನ ಕಿವಿಯ ತುದಿಗಳು ಕೆಂಜಗಾಗಿ ಬಿಸಿಯೇರಿದುವು.

ನೋಡು, ನಂಗೆ ಹಿಂದೊಂದು ಮುಂದೊಂದು ಮಾತಾಡಿ ಅಭ್ಯಾಸ ಇಲ್ಲ. ನಮ್ಮ ಮನಸ್ಸಿನಲ್ಲಿ ಏನುಂಟು ಅನ್ನೋದನ್ನ ಕಡ್ಡಿ ಮುರಿದ ಹಂಗೆ ಹೇಳ್ಬಿಡ್ತೀನಿ ನಾನು. ಮಗಳು, ಮೊಮ್ಮಕ್ಕಳನ್ನ ಅಲ್ಲಿಗೆ ಕಳಿಸಿಕೊಡೋಕೆ ನಮಗೆ ಮನಸ್ಸು ಬರ್ತಿಲ್ಲ..

ಅಂದ್ರೆ? ಕಾಣದೆ ಕೆಂಡ ಮೆಟ್ಟಿದವನಂತೆ ಕುಮುಟಿ ಬಿದ್ದು ಸಟಕ್ಕನೆ ಕೇಳಿದ ರಾಮಚಂದ್ರ.

ಅಂದ್ರೆ ಮತ್ತೆಂತದಲ್ಲ. ನೀನೇ ಇಲ್ಲಿಗೆ ಬಂದು ಇದ್ಬಿಡು ಅಂತ..

ಈ ಮದುವೆ ಒಪ್ಪೋಕೆ ಮುಂಚೆ ಯಾವತ್ತೋ ಒಂದಿನ ನೀನು ಇಲ್ಲಿಗೆ ಬಂದಿರ್ತಿ ಅಂತ ನಾವು ಲೆಕ್ಕ ಹಾಕ್ಕಂಡಿದ್ವು. ಅಣ್ಣ ಅಲ್ಲಿದ್ರೆ ನೀನು ಇಲ್ಲಿ ಅಂತ.. ಬಾಯ್ಬಿಟ್ಟರು ಅತ್ತೆ. ಯಾವತ್ತೋ ಒಂದಿನ ಅಂದರೆ ತನ್ನ ಅಮ್ಮ ಪೆಟ್ಟಿಗೆ ಕಟ್ಟಿದ ನಂತರ ಎಂದು ಅರ್ಥವೇ? ಅಲ್ಲಿಯವರೆಗೆ ಇವರು ಲೆಕ್ಕಾಚಾರ ಹಾಕಿಬಿಟ್ಟಿದ್ದರಾ? ತನಗಾಗುತ್ತಿರುವ ಅಸಹನೆಯನ್ನು ಹತ್ತಿಕ್ಕಿ ವಿನಮ್ರನಾಗಿಯೇ ಕೇಳಿದ ರಾಮಚಂದ್ರ,

ಹಂಗೇನು ಮಾತುಕತೆ ಆಗಿರ್ಲಿಲ್ಲಲ್ಲ?

ಆಗಿರ್ಲಿಲ್ಲ, ಹೌದು. ಹಂಗಂತ ನಾವು ಹೆತ್ತೋರು ಒಂದು ಆಸೆ ಇಟ್ಗಂಡಿದ್ವಪ್ಪಾ. ಇರೋಳೊಬ್ಳು ಮಗಳು. ಕಣ್ಣ ಮುಂದೆ ಸಂಸಾರ ಮಾಡಿಕೊಂಡಿರ್ಲಿ ಅಂತ ಆಸೆಪಟ್ಟಿದ್ರೆ ತಪ್ಪಾ? ಮತ್ತೊಮ್ಮೆ ಸೀರೆಯ ಸೆರಗು ಮುಂದೆ ಬಂತು.

ಮಾತ್ ಮಾತಿಗೆ ಅಳ್ಬೇಡ ಕಣೇ ನೀನು. ಅದೇನು ಹೇಳ್ಬೇಕೂಂತಿದೀಯೋ ಹೇಳ್ಬಿಡು.. ಬಾಯಿ ಬಿಟ್ಟಳು ನಾಗಶ್ರೀ.

ನೋಡಪ್ಪಾ, ತಪ್ಪು ತಿಳ್ಕಂಬೇಡ. ಎರಡೆರಡು ಅಪಮೃತ್ಯು ಕಂಡಂತಾ ಮನೆ. ಬಾಣಂತನ ಮುಗಿಸಿ ಎದ್ದೋಳನ್ನ ಅಲ್ಲಿಗೆ ಕಳಿಸಿಕೊಡಿ ಅಂದ್ರೆ ನಮ್ಮ ಜೀವ ಒಪ್ಪಲ್ಲ. ನಾಳೆ ಏನಾರೂ ಹೆಚ್ಚುಕಮ್ಮಿ ಆಯ್ತೂಂದ್ರೆ ಯಾರು ಹೊಣೆ? ಇರೋಳೊಬ್ಳು ಮಗಳು. ಆಯುಸ್ಸು ಹಾಕ್ಕಂಡು ಕಣ್ಮುಂದೆ ಇರ್ಲಿ ಅಂತ ನಮ್ಮ ಆಸೆ.. ತಮ್ಮ ಮನಸ್ಸಿನಲ್ಲಿದ್ದುದನ್ನು ನೇರಾನೇರ ಹೇಳೇಬಿಟ್ಟರು ಅತ್ತೆ. ಬರಸಿಡಿಲು ಕಿವಿಯ ಪಕ್ಕದಿಂದ ಹಾದು ಹೋದಂತೆ ರಾಮಚಂದ್ರ ತಲ್ಲಣಿಸಿ ಹೋದ.

ಅಪ್ಪ ಸತ್ತು ಎಷ್ಟು ವರ್ಷ ಆಯ್ತು, ಏನು ಕತೆ? ಇಲ್ಲೀವರೆಗೆ ನಾವು ಸುಖವಾಗಿರ್ಲಿಲ್ವಾ? ನಮ್ಮ ವಿಧೀಲಿ ಹಿಂಗಿದ್ದೆಲ್ಲಾ ಅನುಭವಿಸ್ಬೇಕು ಅಂತ ಬರ್ದಿದ್ರೆ ಮನೆ ಎಂತ ಮಾಡುತ್ತೆ?

ಅಪ್ಪ ಹೋಗಿ ಎಷ್ಟೊರ್ಷ ಆಯ್ತು ಅಂತೀಯಲ್ಲ, ಅರ್ಧ ಆಯುಸ್ಸಲ್ಲಿ ಸತ್ತೋರು ತಮ್ಮ ಆಯುಸ್ಸು ಎಷ್ಟು ಉಳ್ಕಂಡಿರುತ್ತೋ ಅದರ ಎರಡರಷ್ಟು ವರ್ಷ ಪ್ರೇತರೂಪದಲ್ಲಿ ಅಲೀತಾರೆ ಅಂತಾರಪ್ಪಾ. ಸುಳ್ಳೋ, ಬದ್ಧಾನೋ ಗೊತ್ತಿಲ್ಲ ನಮಗೆ. ಆದ್ರೆ ನಮ್ಮ ಬುಡಕ್ಕೆ ಬಂದಾಗ ಸತ್ಯ ಅನಿಸೋಕೆ ಶುರುವಾಗುತ್ತೆ..

ಕತೆ ಕಟ್ಟೋಕೇನು, ಏನು ಬೇಕಾರೂ ಕಟ್ಟೋದು.. ಅಂದ ಅಸಹನೆಯಿಂದ ರಾಮಚಂದ್ರ.

ಇನ್ನೂ ಬದುಕಿ ಬಾಳೋ ಆಸೆ ಇಟ್ಗಂಡೋರು ಸತ್ರೆ ಉಳಿದಿರೋರನ್ನ ಸುಖವಾಗಿರೋಕೆ ಬಿಡ್ತಾರಾ? ನಿಮ್ಮಣ್ಣನ್ನ ನಿಮ್ಮಪ್ಪನೇ ಹೊಡ್ಕಂಡ್ಹೋಗಿದ್ದು ಅಂತ ನಮಗೆ ಅನಿಸುತ್ತಪ್ಪಾ. ಇಲ್ದಿದ್ರೆ ಕಣ್ಣು ಮುಚ್ಚಿ ಬಿಡೋದ್ರೊಳಗೆ ಸಾವು ಬರೋದು ಅಂದ್ರೆ ಮತ್ತೆಂತದು?

ಒಂದು ಅಸಹಜ ಸಾವಿನ ಹಿಂದೆ ಏನೇನೆಲ್ಲಾ ಕತೆಗಳು ಹುಟ್ಟಿಕೊಂಡಿವೆ ಎಂಬುದನ್ನು ಕಿವಿಯಾರೆ ಕೇಳಿ ರಾಮಚಂದ್ರನಿಗೆ ಪರಮಾಶ್ಚರ್ಯ. ಹೀಗೂ ಯೋಚಿಸಲು ಸಾಧ್ಯವಾ? ಎನ್ನುವ ಅನಿಸಿಕೆ. ಅಥವಾ ತಮ್ಮ ಇಚ್ಛೆಗೆ ತಕ್ಕಂತೆ ನನ್ನನ್ನು ಮಣಿಸಲು ಇವರು ಕತೆ ಹೆಣೆಯುತ್ತಿದ್ದಾರೆಯೇ? ನಂಬಿಯೇಬಿಟ್ಟಿದ್ದಾಳಾ ನಾಗಶ್ರೀ? ಇಂತಾ ಮಾತಾಡುತ್ತಿರುವವರೂ ನಂಬಿಕೆ ಇಟ್ಟುಕೊಂಡೇ ಮಾತಾಡುತ್ತಿದ್ದಾರಾ? ತಲೆ ಹನ್ನೆರಡಾಣೆ ಆದಂತಾಯ್ತು.

ಹಿಂಗೆಲ್ಲಾ ಮಾತಾಡ್ತಿದ್ರೆ ಬಗೆಹರಿಯೋ ಪಂಚಾತ್ಕೆ ಅಲ್ಲ. ಆಯ್ತು, ನಿಮ್ಮ ಹಂಗೇ ಆಗ್ಲಿ. ಮನೇಲಿ ಬಲವಾದ ಒಂದು ಪೂಜೆ ಮಾಡ್ಸಿದ್ರೆ ಸೈಯಲ್ಲ? ನಾಗಶ್ರೀ ಆಮೇಲೇ ಮನೆಗೆ ಬರ್ಲಿ, ಆಯ್ತಾ? ಅತ್ತೆಯ ಮುಖ ನೋಡಿದ ರಾಮಚಂದ್ರ. ಅತ್ತೆ ಗಂಡನ ಮುಖ ನೋಡಿದರು.

ನೋಡು ರಾಮಚಂದ್ರ, ನಾ ಹೇಳೋದನ್ನ ಗಮನ ಇಟ್ಟು ಕೇಳ್ಕಾ. ನಮ್ಮ ಹುಡುಗಿ ಗಟ್ಟಿಗಿತ್ತಿ ಅಲ್ಲ. ಅಂಗೈ ಮಲ್ಲಿಗೆ ಥರ ಸಾಕಿದೀವಿ. ಮನೇಲಿ ಓಡಾಡೋದೇ ಹೆದ್ರಿಕೆ ಅನ್ನೋಕೆ ಶುರುವಾದ್ರೆ ಅಂತಲ್ಲಿ ನಿರುಮ್ಮಳವಾಗಿ ಬದುಕಿ ಬಾಳೋದು ಹೆಂಗೆ? ಪೂಜೆ ಗೀಜೆ ಅಲಾಯಿದ. ಪೂಜೇನೋ, ಶಾಂತೀನೋ ಮಾಡಿಸಿದ ಮಾತ್ರಕ್ಕೆ ಎಲ್ಲಾ ಸರಿಯಾಗ್ಬಿಡುತ್ತೆ ಅಂತ ನಂಗಂತೂ ನಂಬಿಕೆ ಇಲ್ಲ.. ಶೀನಪ್ಪಯ್ಯ ಅರ್ಥ ಮಾಡಿಸುವವರಂತೆ ಬಿಡಿಸಿ ಬಿಡಿಸಿ ಹೇಳಿದರು. ಅವರು ಬಾಯಿ ಮುಚ್ಚುತ್ತಿದ್ದಂತೆ ಅತ್ತೆ ಶುರು ಮಾಡಿದರು,

ನೀನೇನು ಇಪ್ಪತ್ನಾಕು ಗಂಟೇನೂ ಮನೇಲಿ ಗೂಟ ಹೊಡ್ಕಂಡು ಕೂತಿರೋಕಾಗುತ್ತಾ? ಅಡಿಕೆಮಾರಾಟಕ್ಕಾದ್ರೂ ಎರಡು ದಿನ ಊರು ಬಿಡೋ ಸಂದರ್ಭ ಬರುತ್ತಾ, ಇಲ್ವಾ ನೀನೇ ಹೇಳು. ಸಣ್ಣ ಮಕ್ಳನ್ನ ಕಟ್ಕೊಂಡು ಒಬ್ಬಂಟಿಯಾಗಿ ಹೆಂಗಿರ್ತಾಳೆ ಹುಡುಗಿ? ನೀನೇ ಯೋಚ್ನೆ ಮಾಡು..

ಇರ್ತಾಳಲ್ಲ ಅಮ್ಮ? ಅಷ್ಟೂ ಬೇಕೂಂತಾದ್ರೆ ಕೆಲಸದೋರು ಯಾರನ್ನಾದ್ರೂ ಮನೇಲಿ ಮಲಗೋ ವ್ಯವಸ್ಥೆ ಮಾಡಿದ್ರಾಯ್ತು..

ಶೀನಪ್ಪಯ್ಯ ತಲೆ ಅಲುಗಿಸಿದರು.

ನಾವಾಗಿ ತಲೇ ಮೇಲೆ ಬಂಡೆ ಯಾಕೆ ಎಳ್ಕಂಬೇಕು? ನೀನು ಇಲ್ಲಿಗೆ ಬಂದಿರೋಕೆ ತೊಂದ್ರೆ ಏನಿದೆ? ಅದಾರೂ ಬಾಯಿ ಬಿಟ್ಟು ಹೇಳು..

ಅದ್ಹೆಂಗಾಗುತ್ತೆ ಮಾವ? ಅಮ್ಮನ್ನ ಏನ್ಮಾಡೋದು ನಾನು? ಅಲ್ಲಿನ ಮನೆ, ಜಮೀನು, ಜಾನುವಾರು ನಿಮ್ಮ ಹಂಗೆ ನಂಗೂ ಕೊರಳಿಗೆ ಸುತ್ಕಂಡಿದೆಯಲ್ಲ?

ಹುಚ್ಚು ಹುಡುಗ. ನಿನ್ನಮ್ಮನ್ನ ಬೀದೀಲಿ ಬಿಸಾಕಿ ಬಾ ಅಂತ ಹೇಳ್ತೀವಾ ನಾವು? ಕಣ್ಣಲ್ಲಿ ರಕ್ತ ಇಲ್ವಾ ನಮಗೆ? ಅವ್ರೂ ನಿಂಜೊತೆ ಇಲ್ಲಿಗೇ ಬಂದಿರ್ಲಿ. ಒಳ್ಳೇ ರೇಟು ಸಿಕ್ಕಿದ್ರೆ ಜಮೀನು, ಮನೆ ಮಾರಿದ್ರಾಯ್ತಪ್ಪಾ. ಅದ್ಯಾವ ದೊಡ್ಡ ಸಮಾಚಾರ? ಮಾವ ಹಗುರವಾಗಿ ಹೇಳಿದರು.

ಅಮ್ಮಂಗೆ ಈ ವ್ಯವಸ್ಥೆ ಇಷ್ಟ ಆಗಲ್ಲ. ಇಷ್ಟೊರ್ಷ ಸ್ವತಂತ್ರವಾಗಿ ಬದುಕು ಮಾಡ್ದೋಳು..

ಸಂದರ್ಭಕ್ಕೆ ತಕ್ಕ ಹಾಗೆ ಮನುಷ್ಯ ಬದಲಾಗ್ಬೇಕಪ್ಪಾ. ಮೊದಲು ಇದ್ದ ಹಾಗೇ ಕೊನೇವರೆಗೂ ಇರ್ತೀನಿ ಅಂದ್ರೆ ಆಗುತ್ತಾ? ನೀನೇ ಯೋಚ್ನೆ ಮಾಡು.. ಶೀನಪ್ಪಯ್ಯ ಅಳಿಯನಿಗೆ ಬುದ್ಧಿ ಹೇಳಿದರು.

ಸ್ವತಂತ್ರವಾಗಿ ಇರ್ಲೇಬೇಕು ಅಂತ ನಿಮ್ಮಮ್ಮಂಗೆ ಅನ್ನಿಸಿದ್ರೆ ಇಲ್ಲೇ ಒಂದು ಸಣ್ಣ ಮನೆ ಎಬ್ಬಿಸಿದ್ರಾಯ್ತಪ್ಪಾ. ಮೊಮ್ಮಕ್ಕಳು ಹೋಗಿ, ಬಂದು ಮಾಡ್ತಿರ್ತಾವೆ. ಇರಲಿ ನಿಶ್ಚಿಂತೆಯಾಗಿ.. ಹೇಳಿದರು ಸರೋಜಮ್ಮ. ಅಂದರೆ? ಈ ವಯಸ್ಸಿನಲ್ಲಿ ಅಮ್ಮ ಬೇರೆ ಬಿಡಾರ ಮಾಡಿಕೊಂಡು ಒಕ್ಕುಂಟ್ಲಿಯ ಹಾಗೆ ಇರಬೇಕಾ? ತಾನು ಅಮ್ಮನ ಜೊತೆ ಇರಬೇಕಾ, ಇಲ್ಲಾ ಮನೆ ಅಳಿಯನಾಗಿರಬೇಕಾ ಎಂದು ನಿಶ್ಚಯಿಸುವ ಹಕ್ಕನ್ನು ಇವರೇ ಇಟ್ಟುಕೊಂಡುಬಿಟ್ಟಿದ್ದಾರಾ? ರಾಮಚಂದ್ರ ಬಿಗಿಯಾಗಿಯೇ ಉತ್ತರ ಕೊಟ್ಟ,

ನಮ್ಮಮ್ಮನ ಪರಿಸ್ಥಿತಿ ಹೆಂಗಾಗಿದೇಂತ ಹೇಳಿದೀನಿ ನಾನು. ಒಂದು ಕಡ್ಡಿ ಈಚೆ ಕಡೆಂದ ಎತ್ತಿ ಆಚೆ ಕಡೆ ಇಡೋಕೆ ಅವಳ ಕೈಲಿ ಹರೀತಿಲ್ಲ. ಅಂತೋಳನ್ನ ಬೇರೆ ಕೂರಿಸೋಕಾಗುತ್ತಾ? ಪ್ರತಿಯೊಂದಕ್ಕೂ ಒಬ್ಬರ ನಿಗಾ ಇರ್ಲೇಬೇಕು..

ಹಂಗಾದ್ರೆ ಇರ್ಲಿ ಇಲ್ಲೇ. ನೋಡ್ಕಂತೀನಿ ನಾನು. ನಿಮ್ಮಮ್ಮ ಒಬ್ರು ಹೆಚ್ಚಾದ್ರೆ ಈ ಮನೆಗೆ ಭಾರ ಆಗಲ್ಲ.. ಅತ್ತೆ ಇಷ್ಟಕ್ಕೆ ನಿಲ್ಲಿಸಲಿಲ್ಲ ತಮ್ಮ ಮಾತು,

ನಮ್ಮ ಹುಡುಗಿ ವಿಷಯ ನಿಂಗೆ ಗೊತ್ತಿಲ್ಲ ಮಾರಾಯಾ. ಒಂದಿಡೀ ಮನೆ ಜವಾಬ್ದಾರಿ ನಿಭಾಯ್ಸೋಕೆ ಇವಳಿಂದ ಸಾಧ್ಯಿಲ್ಲ. ಇನ್ನು ಇವಳೇನಾರೂ ನಿನ್ನಮ್ಮನ ಸೇವೆ ಮಾಡ್ತಾಳೆ ಅಂತ ನೀನು ನಂಬ್ಕಂಡಿದ್ರೆ ಸುಳ್ಳೇ ಸುಳ್ಳು. ಸ್ವಂತ ಮಗು ಹೇತ್ಕಂಡ್ರೂ ಅಂಡೊರೆಸೋಕೆ ನನ್ನ ಕರೀತಾಳೆ. ಹಂಗಿದ್ದ ನಾಜೂಕು. ಮಗಳು ವಾಂತಿ ಮಾಡ್ಕಂತು ಅಂದ್ರೆ ಬಳಿಯೋಕೆ ನಾನೇ ಬರ್ಬೇಕು. ಇಲ್ದಿದ್ರೆ ಇವಳಿಗೇ ವಾಂತಿ ಬಂದ್ಬಿಡುತ್ತೆ. ಹಿಡಿದಿದ್ದು ಮುಟ್ಟಿದ್ದಕ್ಕೆಲ್ಲಾ ಅಸಂಯ್ಯ ಅಂತಾಳೆ..

**(ಸಶೇಷ)**